ವರ್ಷಗಳಲ್ಲಿ ಸಂಗ್ರಹವಾಗಿರುವ ವಾಹನ ತೆರಿಗೆ ಎಷ್ಟು?

ಆ) ಇದರಲ್ಲಿ ಎಷ್ಟು ಭಾಗವನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ವರ್ಗಾಯಿಸಲಾಗಿದೆ?

ಉತ್ತರ

ಆ)	ವರ್ಷ	ಒಟ್ಟು ಸಂಗ್ರಹವಾದ ಮೋಟಾರು ವಾಹನ ತೆರಿಗೆ (ಕೋಟಿಗಳಲ್ಲಿ)
	1998-99	159 53
	1999-2000	186 27
	2000-2001	213 77

ಆ) ರಾಜ್ಯ ಹಣಕಾನು ಆಯೋಗದ ಶಿಫಾರಸ್ಸನನ್ವಯ ರಾಜ್ಯದ ಒಟ್ಟು ಸಾಲವೇತರ ರಾಜಸ್ವ ಸ್ವೀಕೃತಿಯ ಶೇಕಡ 36ರಷ್ಟನ್ನು ನಗರ ಸ್ಥಳೀಯ ಸಂಸ್ಥೆಗಳು ಮತ್ತು ಜಿಲ್ಲಾ ಪಂಚಾಯತಿಗಳಿಗೆ ನೀಡಲಾಗುವುದು ಮೇಲಿನ ಶೇಕಡಾ 36ರಲ್ಲಿ, ಶೇಕಡಾ 15ರಷ್ಟನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗುವುದು ನಗರ ಸ್ಥಳೀಯ ಸಂಸ್ಥೆಗಳ ಅನುದಾನದಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ತನ್ನ ಪಾಲನ್ನು ಪಡೆಯುತ್ತದೆ ಆದುದರಿಂದ ವಾಹನ ತೆರಿಗೆಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆಗೆ ಪಾಲು ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ

ರಾಜ್ಯದ ಬೊಕ್ಕಸಕ್ಕ ಸಂದಾಯವಾದ ತೆರಿಗೆ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 131(521)

ಸದಸ್ಯರ ಹೆಸರು ಶ್ರೀ ಪಾಟೀಲ್ ಡಿ ಆರ್(ಗದಗ್)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ(ಮುಖ್ಯ ಮಂತ್ರಿಗಳು)

ಪ್ರಶ್ನೆ

ಆ) ಕಳೆದ 3 ವರ್ಷಗಳಲ್ಲಿ ರಾಜ್ಯದ ಬೊಕ್ಕಸಕ್ಕೆ ತೆರಿಗೆ ವಾಣಿಜ್ಯ ತೆರಿಗೆ, ಅಬಕಾರಿ

ತೆರಿಗೆ ಹಾಗೂ ಸ್ಟ್ಯಾಂಪ್ ಶೆರಿಗೆಯಿಂದ ಸಂಗ್ರಹವಾದ ಆದಾಯ ಎಷ್ಟು ತೆರಿಗೆವಾರು ಪ್ರತ್ಯೇಕ ವಿವರ ನೀಡುವುದು

ಆ) ತೆರಿಗೆ ಸಂಗ್ರಹಣೆಯ ಖಾಸಗೀಕರಣ ಮಾಡಲು ಸರಕಾರ ಕ್ರಮ ಕೈಗೊಳ್ಳುವುದೇ?

ಉತ್ತರ

ಅ) ವಿವಿಧ ಕಾಯ್ದೆ ಅನ್ವಯ ಕಳೆದ ಮೂರು ವರ್ಷಗಳಿಂದ ಸಂಗ್ರಹಣೆ ಮಾಡಲಾದ ತೆರಿಗೆ ವಿವರ ಈ ಕೆಳಕಂಡಂತೆ ಇರುತ್ತದೆ

	ಕಾಯ್ದೆ ವಿವಿಧ ಕಾಯ್ದೆ ವರ್ಷವಾರು ಸಂಗ್ರಹಣೆ ವಿವರ		
	(ರೂ ಕೋಟಿಗಳಲ್ಲಿ)		
	1998-99	1990-00	2000-01
1) ಕಮಾತ	4475 05	4850 53	5473 68
2) ಕಪ್ರತೆ	300 63	370 03	497 31
3) ಕವೃತೆ	111 30	130 46	149 62
4) ಕಮತೆ	48 34	47 60	47 63
5) ಕವಿತೆ	47 17	61 87	69 33
6) ಬಾತೆ	12 21	11 98	13 68
7) ಕಕೃವತೆ	49 47	31 62	23 77
ಒಟ್ಟು	5044 17	5504 14	6275 02
ಮುದ್ರಾಂಕ ಮತ್ತು ನೋಂದಾಣಿ	560 69	659 88	794 20
ಅಬಕಾರಿ	1019 11	1233 54	1550 23

ಆ) ಅಂದಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ

ಲಾಟರಿ ಯೋಜನೆಯಿಂದ ಬಂದ ಆದಾಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 132(459)

ಸದಸ್ಯರ ಹೆಸರು ಶ್ರೀ ಜೆ ಟಿ ಪಾಟೀಲ್(ಬೀಳಗಿ)

ಉತ್ತರಿಸುವ ಸಚಿವರು ಶ್ರೀ ಬಾಬುರಾವ್ ಬಸವಣ್ಣಪ್ಪ ಚಿಂಚಸನೂರು (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮಾ ರಾಜ್ಯ ಸಚಿವರು)

ಪ್ರಶ್ನೆ

1 ಲಾಟರಿ ಯೋಜನೆಯಿಂದ ಪ್ರತಿ ವರ್ಷ ಸರ್ಕಾರಕ್ಕೆ ಬರುವ ಆದಾಯ ಎಷ್ಟು?

2 ಡೂಪ್ಲಿಕೇಟ್ ಟಿಕೇಟುಗಳು ಮಾರಾಟವಾಗುತ್ತಿರುವುದು ನತ್ಯವೆ?

3 ರಾಜ್ಯದಲ್ಲಿ ಸಂಪೂರ್ಣವಾಗಿ ಎಲ್ಲಾ ಲಾಟರಿಗಳನ್ನು ರದ್ದುಪಡಿಸಿ ಬಡ ಹಾಗೂ ಮಧ್ಯಮ ಕುಟುಂಬ ವರ್ಗದವರು ಮೋಸ ಹೋಗುತ್ತಿರುವುದನ್ನು ತಪ್ಪಿಸಲು ಸಾಧ್ಯವಿಲ್ಲವೇ?

ಉತ್ತರ

1 1998-1999ನೇ ಸಾಲಿಗೆ ನಿವ್ವಳ ಆದಾಯ ರೂ 12 28 ಕೋಟಿಗಳು

1999-2000ನೇ ಸಾಲಿಗೆ ನಿವ್ವಳ ಆದಾಯ ರೂ 10 88 ಕೋಟಿಗಳು

2001-2002ನೇ ಸಾಲಿಗೆ ನಿವ್ವಳ ಆದಾಯ ರೂ 9 13 ಕೋಟಿಗಳು

2 ಸರ್ಕಾರದ ಗಮನಕ್ಕೆ ಬಂದಿಲ್ಲ

3 ಈ ವಿಚಾರ ಪರಿಶೀಲನೆಯಲ್ಲಿಲ್ಲ

ರಾಜ್ಯದ ಸಾಲದ ಮೊತ್ತ